ಆ) ೧೯೮೮ ನೇ ಸಾಲಿನಲ್ಲಿ ರಾಜ್ಯಂದ್ಯಂತ ಕರ್ನಾಟಕ ಸರ್ಕಾರವು ಒಟ್ಟು ೭೦೦ ಕೋಟಿ ಮತ್ತು ನಿವ್ವಳ ೩೫೦ ಕೋಟಿ ರೂಪಾಯಿಗಳನ್ನು ಸಣ್ಣ ಉಳಿತಾಯದಲ್ಲಿ ಸಂಗ್ರಹಿಸಲು ಉದ್ದೇಶಿಸಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರ ಪರವಾಗಿ),— ಮಾನ್ಯ ಅಧ್ಯಕ್ಷರೇ, ೧೯೮೮-೮೯ನೇ ಸಾಲಿನಲ್ಲಿ ೭೦೦ ಕೋಟಿ ಮತ್ತು ನಿವ್ವಳ ೩೫೦ ಕೋಟಿ ರೂಪಾಯಿಗಳನ್ನು ಸಂಗ್ರಹಣೆ ಮಾಡುವಂಥ ಉದ್ದೇಶವನ್ನು ಇಟ್ಟುಕೊಂಡಿದ್ದೀರಿ. ಆದರೆ ೧೯೮೭-೮೮ನೇ ಸಾಲಿನಲ್ಲಿ ತಮ್ಮ ಗುರಿ ಏನಿತ್ತು, ಮತ್ತು ಎಷ್ಟು ಸಾಧನೆಯನ್ನು ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ? ಎರಡನೆಯದು, ಈ ರೀತಿ ಸಂಗ್ರಹಿಸಿದಂಥ ಹಣದಲ್ಲಿ ಮರುಪಾವತಿಯಾಗಿ, ಲೋನ್ ರೂಪದಲ್ಲಿ ಅಥವಾ ನಮಗೆ ಎನ್‌ಕರೇಜ್‌ಮೆಂಟ್ ಎಂದು ಹೇಳಿ ಸಿಗತಕ್ಕ ಹಣ ಎಷ್ಟು? ಕೇಂದ್ರ, ಸರ್ಕಾರದಿಂದ ಲೋನ್ ರೂಪದಲ್ಲಿ ಅಸಿಸ್ಟೆನ್ಸ್ ರೂಪದಲ್ಲಿ ಸಿಗತಕ್ಕಂಥ ಹಣ ಎಷ್ಟು? ಮತ್ತು ಈಗ ನಿಗದಿ ಮಾಡಿರುವಂಥ ಗುರಿ ಏನಿದೆ, ಅದರಲ್ಲಿ ಬರತಕ್ಕ ಹಣ ಎಷ್ಟು?

ಶ್ರೀ ವೀರಣ್ಣ,— ಮಾನ್ಯ ಅಧ್ಯಕ್ಷರೇ, ೧೯೮೭-೮೮ ನೇ ಸಾಲಿನಲ್ಲಿ ೬೦೦ ಕೋಟಿ ಮತ್ತು ನಿವ್ವಳ ೩೫೫ ಕೋಟಿ ರೂಪಾಯಿಗಳ ಗುರಿ ಇತ್ತು. ಇದರಲ್ಲಿ ೬೦೩ ಕೋಟಿ ರೂಪಾಯಿಗಳ ಗುರಿಯನ್ನು ಸಾಧನೆ ಮಾಡಿದ್ದೇವೆ. ಮತ್ತೆ ೧೯೮೭-೮೮ರಲ್ಲಿ ೧೪೩ ಕೋಟಿ ೯೯ ಲಕ್ಷ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಹಣ ಲೋನ್ ರೂಪದಲ್ಲಿ ಬಿಡುಗಡೆ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಪ್ರೋತ್ಸಾಹಧನವನ್ನು ತಾವು ಈಗಾಗಲೇ ಏನು ನಮೂದು ಮಾಡಿದ್ದೀರಿ, ೩ ಪರ್ಸೆಂಟ್, ೨ ಪರ್ಸೆಂಟ್ ಎಂದು ಈ ರೂಪದಲ್ಲಿ ಸಿಗತಕ್ಕ ಹಣ ಎಷ್ಟು ಎಂದು ಹೇಳಬೇಕು.

ಶ್ರೀ ವೀರಣ್ಣ.— ಪ್ರೋತ್ಸಾಹ ರೂಪದಲ್ಲಿ ೧೯೮೫-೮೬ನೇ ಇಸವಿಯಲ್ಲಿ ಕರ್ನಾಟಕ ಸರ್ಕಾರ ನ್ಯಾಷನಲ್ ಆವರೇಜ್‌ನಲ್ಲಿ ಪ್ರಥಮ ಸ್ಥಾನದಲ್ಲಿದೆ. ಇದಕ್ಕೆ ಪ್ರೋತ್ಸಾಹಧನವಾಗಿ ಕೇಂದ್ರ ಸರ್ಕಾರ ೧೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಮಂತ್ರಿ ತಮ್ಮ ಮಾಹಿತಿಗಾಗಿ ೧೯೮೫-೮೬ನೇ ಸಾಲಿನಿಂದ ಇಲ್ಲಿಯವರೆಗೂ ೫೯ ಕೋಟಿ ೨೯ ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರ, ಸಾಲದ ರೂಪದಲ್ಲಿ ಸಣ್ಣ ಉಳಿತಾಯದ ಮೂಲಕ ಬಿಡುಗಡೆ ಮಾಡಿದೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

೧೭೬೨. ಶ್ರೀ ಆರ್.ಎನ್. ನಾಯಕ್,(ಭಟ್ಕಳ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಹುಟ್ಟಿದ ಜಿಲ್ಲೆಗಳಲ್ಲಿಯೇ ಕೆಲಸ ಮಾಡುತ್ತಿರುವ ಸಬ್‌ಇನ್ಸ್‌ಪೆಕ್ಟರ್ ಮತ್ತು ಅದಕ್ಕೂ ಮೇಲ್ದರ್ಜೆಯ ಪೋಲೀಸ್ ಅಧಿಕಾರಿಗಳ ಸಂಖ್ಯೆ ಎಷ್ಟು?

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹುಟ್ಟಿ ಬೆಳೆದ ಎಷ್ಟು ಪೋಲೀಸ್ ಅಧಿಕಾರಿಗಳು ಅದೇ ಜಿಲ್ಲೆಯಲ್ಲಿ ಯಾವ ಯಾವ ಕಡೆ ಕೆಲಸ ನಿರ್ವಹಿಸುತ್ತಿದ್ದಾರೆ.?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು).—

ಅ) ಶಿಖರ,

ಆ) ಕುಮಟಾ — ೧
ಕಾರವಾರ — ೧೨
ಶಿರಸಿ — ೪
ಮಾಗೋಡು — ೨
ಚಿತಗೋಳ — ೧
ಹೊನ್ನಾವರ — ೧
ಅಂಬಿಕಾನಗರ — ೧
ಯಲ್ಲಾಪುರ — ೧
ದಾಂಡೇಲಿ — ೩
ತಟ್ಟಿಹಳ್ಳಿ — ೧

ಒಟ್ಟು — ೨೭

ನ್ಯಾಯ ಬೆಲೆ ಅಂಗಡಿಗಳಿಗೆ ಪರವಾನಿಗೆಗಳನ್ನು ನೀಡುವುದು

೧೬೦೨. ಶ್ರೀ ಸಿ.ಪಿ. ಮೂಡಲ ಗಿರಿಯಪ್ಪ (ಶಿರಾ).— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನ್ಯಾಯ ಬೆಲೆ ಅಂಗಡಿಗಳಿಗೆ ಪರವಾನಿಗೆ ಕೊಡಲು ಸರ್ಕಾರವು ಅನುಸರಿಸುತ್ತಿರುವ ನೀತಿ ಏನು?

ಆ) ಜಿಲ್ಲಾ ಪರಿಷತ್ತುಗಳಿಗೆ ಪರವಾನಿಗೆ ನೀಡಲು ನಿರ್ದಿಷ್ಟವಾದ ಆದೇಶ ನೀಡಲಾಗಿದೆಯೇ?

ಇ) ಶಿರಾ ತಾಲ್ಲೂಕು ಪುಟಿಗನ ಹಳ್ಳಿಯಲ್ಲಿ ದಯಾನಂದ ಸಾಗರ್ ಎಂಬುವನ ಮೇಲೆ ನೀತಿ ನಿಯಮಗಳ ಉಲ್ಲಂಘನೆಯಿಂದಾಗಿ ಅಧಿಕಾರಿಗಳು ಆಪಾದನೆ ಮಾಡಿ ವಿತರಣೆಯನ್ನು ತಡೆ ಹಿಡಿದಿದ್ದುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈತನ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮ ಏನು?

ಈ) ನೂರೈವತ್ತು ಕಾರ್ಡುದಾರರಿಗೆ ಒಂದು ನ್ಯಾಯ ಬೆಲೆ ಅಂಗಡಿಯನ್ನು ತೆರೆಯಲು ಲೈಸನ್ಸ್ ನೀಡುವುದು ಸರ್ಕಾರದ ನೀತಿಗೆ ಅನುಸಾರವಾಗಿದೆಯೇ ಹಾಗಿಲ್ಲದೆ ಇದ್ದಲ್ಲಿ ಶಿರಾ ತಾಲ್ಲೂಕು ಮಾನಂಗಿಯಲ್ಲಿ ಜಿಲ್ಲಾ ಪರಿಷತ್ತು ಸದಸ್ಯರ ಸಹೋದರನಿಗೆ ಲೈಸನ್ಸ್ ಕೊಟ್ಟಿರುವುದರ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಮಂತ್ರಿಗಳು).—

ಅ) ನ್ಯಾಯ ಬೆಲೆ ಅಂಗಡಿಗೆ ಪರವಾನಗಿಯನ್ನು ಕೊಡಲು ಸರ್ಕಾರವು ಈ ಕೆಳಕಂಡ ನೀತಿಯನ್ನು ಅನುಸರಿಸುತ್ತಿದೆ.

೧) ನ್ಯಾಯ ಬೆಲೆ ಅಂಗಡಿಗೆ ಕನಿಷ್ಟ ೫೦೦ ಪಡಿತರ ಚೀಟಿಗಳನ್ನು ನಿಯೋಜಿಸಬೇಕು.

೨) ಒಂದಕ್ಕಿಂತ ಹೆಚ್ಚು ಹಳ್ಳಿಗಳಿಗೆ ಕೂಡಿ ಒಂದು ನ್ಯಾಯ ಬೆಲೆ ಅಂಗಡಿಯಿದ್ದಲ್ಲಿ ಹಳ್ಳಿ ಮತ್ತು ನ್ಯಾಯಬೆಲೆ ಅಂಗಡಿಯಂ ನಡುವಣ ದೂರವು ೩ ಕಿ.ಮೀ. ಮೀರಿರಬಾರದು.

೩) ನ್ಯಾಯ ಬೆಲೆ ಅಂಗಡಿ ವಂಜೂರು ಮಾಡಲು ಸಹಕಾರ ಸಂಘ ಮಹಿಳಾ ಮಂಡಳ ಮತ್ತು ಇತರೆ ಸಂಘ ಸಂಸ್ಥೆಗಳಿಗೆ ಆದ್ಯತೆ ನೀಡಬೇಕು.